ಶ್ರೀ ಗೋವಿಂದ ಎಂ. ಕಾರಜೋಳ : ಈ ರಾಜ್ಯದಲ್ಲಿರುವ ರಸ್ತೆಗಳ ಪರಿಸ್ಥಿತಿ ಏನು? ಅದು ಸರ್ಕಾರವು ಕೊಟ್ಟಂತಹ ಹಣವಾಗಿರುತ್ತದೆ. ಲೋಕೋಪಯೋಗಿ ಕಾರ್ಯದರ್ಶಿಗಳು ಇಲ್ಲಿಯೇ ಇದ್ದಾರೆ. ಅದಕ್ಕಾಗಿ ದಯಮಾಡಿ ಸ್ವಲ್ಪ ಕ್ಲಾರಿಫಿಕೇಷನ್‌ನ್ನು ಕೊಡಿ. ಯಾವ ಕಾರಣಕ್ಕಾಗಿ ಹಣವನ್ನು ಬೇರೆ ಕಡೆಗೆ ವರ್ಗ ಮಾಡಿಕೊಂಡಿದ್ದೀರಿ? ಅದು ರಸ್ತೆಗಳ ನಿರ್ವಹಣೆಗೆ ಕೊಟ್ಟಂತಹ ಹಣವಾಗಿರುತ್ತದೆ. 11ನೇ ಹಣಕಾಸಿನ ಯೋಜನೆಯಡಿಯಲ್ಲಿ ಕೊಟ್ಟಂತಹ ಹಣವಾಗಿರುತ್ತದೆ. ದಯವಿಟ್ಟು ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಇಲ್ಲಿ ನನ್ನ ಹತ್ತಿರ ಉತ್ತರವಿಲ್ಲ. ಅವರು ಬೇರೆ ರೂಪದಲ್ಲಿ ಪ್ರಶ್ನೆಯನ್ನು ಕೊಡಲಿ. ಅದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತೇನೆ.

ರೈತರಿಗೆ 24 ಗಂಟೆ ನಿರಂತರ ವಿದ್ಯುತ್ ಸರಬರಾಜು

39 (315): ಶ್ರೀ ಬಸವರಾಜು ಹೆಚ್.ಡಿ (ವಿರಾಜಪೇಟೆ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಕ್ಕೆ ಪ್ರತಿ ನಿತ್ಯ ಅಗತ್ಯವಿರುವ ವಿದ್ಯುತ್‌ನ ಪ್ರಮಾಣ ಎಷ್ಟು (ಜಿಲ್ಲಾವಾರು ವಿವರ ನೀಡುವುದು).

ಆ) ಹಾಲಿ ಸರ್ಕಾರ ಉತ್ಪಾದನೆ ಮಾಡುತ್ತಿರುವ ವಿದ್ಯುತ್ ಎಷ್ಟು;

ಇ) ಯಾವ ಯಾವ ಮೂಲಗಳಿಂದ ಎಷ್ಟು ವಿದ್ಯುತ್ ಉತ್ಪಾದನೆಯಾಗುತ್ತದೆ;

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಪ್ರಸಕ್ತ ವರ್ಷವಾದ 2004–05ರಲ್ಲಿ ರಾಜ್ಯದ ದಿನವಹಿ ಸರಾಸರಿ ಅನಿರ್ಭಂದಿತ ವಿದ್ಯುತ್ ಬೇಡಿಕೆಯು 106.7 ದಶಲಕ್ಷ ಯೂನಿಟ್‌ಗಳೆಂದು ಅಂದಾಜು ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಹಾಲಿ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ಎರಡು ಸಂಸ್ಥೆಗಳಾದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಮತ್ತು ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತವು ದಿನವಹಿ ಸರಾಸರಿ ಒಟ್ಟು 51.4 ದಶಲಕ್ಷ ಯೂನಿಟ್‌ಗಳ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿವೆ. ಅಲ್ಲದೇ, ಖಾಸಗಿ ಕ್ಷೇತ್ರದಲ್ಲಿ ರಾಜ್ಯದಲ್ಲಿ ಇರುವ ಸ್ವತಂತ್ರ ವಿದ್ಯುತ್ ಉತ್ಪಾದಕರು ಸಹ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದ್ದು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಹಾಲೀ ದಿನವಹಿ ಸರಾಸರಿ 15.7 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್‌ನ್ನು ಖರೀದಿಸುತ್ತಿದೆ.

ಅಲ್ಲದೇ, ರಾಜ್ಯಕ್ಕೆ ಕೇಂದ್ರದ ಸ್ವಾಮ್ಯದಲ್ಲಿರುವ ವಿದ್ಯುತ್ ಘಟಕಗಳಿಂದ ಸರಾಸರಿ ದಿನವಹಿ 25.4 ದಶಲಕ್ಷ ಯೂನಿಟ್‌ಗಳ ಪಾಲೂ ಸಹ ಲಭ್ಯವಿರುತ್ತದೆ.

ಇ) ಮೂಲವಾರು ವಿವರಗಳು ಕೆಳಕಂಡಂತಿವೆ :

ಕ್ರಮ ಸಂಖ್ಯೆ	ಉತ್ಪಾದನೆಯ ಮೂಲ	ಸರಾಸರಿ ವಿದ್ಯುತ್ ಉತ್ಪಾದನೆಯ ಪ್ರಮಾಣ ದಶಲಕ್ಷ ಯೂನಿಟ್‌ಗಳಲ್ಲಿ

ಅ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತ :

1.	ಜಲ	22.9
2.	ಶಾಖೋತ್ಪನ್ನ	25.0
	ಒಟ್ಟು	**47.9**

ಆ. ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ :

1.	ಜಲ	1.35
2.	ಶಾಖೋತ್ಪನ್ನ	2.15
	ಒಟ್ಟು	**3.50**

ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ. ಬಸವರಾಜುರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 315ಕ್ಕೆ ಅನುಬಂಧ:

ಸರಾಸರಿ ದಿನವಹಿ ಅನಿರ್ಭಂದಿತ ವಿದ್ಯುತ್ ಬೇಡಿಕೆಯ ಜಿಲ್ಲಾವಾರು ವಿವರಗಳು :

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ಸರಾಸರಿ ದಿನವಹಿ ಅನಿರ್ಭಂದಿತ ವಿದ್ಯುತ್ ಬೇಡಿಕೆಯ ಪ್ರಮಾಣ (ದಶಲಕ್ಷ ಯೂನಿಟ್‌ಗಳಲ್ಲಿ)
	ಅ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	
1.	ಬೆಂಗಳೂರು (ನಗರ)	23.0
2.	ಬೆಂಗಳೂರು (ಗ್ರಾಮಾಂತರ)	7.0
3.	ತುಮಕೂರು	6.0
4.	ಕೋಲಾರ	6.0
5.	ಚಿತ್ರದುರ್ಗ	3.0
6.	ದಾವಣಗೆರೆ	3.0
	ಒಟ್ಟು	48.0
	ಆ. ಮಂಗಳೂರು ವಿದ್ಯುತ್ ಸರಬರಾಜು ಕಂಪನಿ	
1.	ದಕ್ಷಿಣ ಕನ್ನಡ	4.0
2.	ಮೈಸೂರು	4.0
3.	ಮಂಡ್ಯ	3.0
4.	ಕೊಡಗು	0.5
5.	ಉಡುಪಿ	3.0
6.	ಶಿವಮೊಗ್ಗ	3.0
7.	ಚಿಕ್ಕಮಗಳೂರು	4.0
8.	ಚಾಮರಾಜನಗರ	2.0
9.	ಹಾಸನ	2.0
	ಒಟ್ಟು	**25.5**

ಇ. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ

1.	ಧಾರವಾಡ	2.0
2.	ಗದಗ	1.0
3.	ಹಾವೇರಿ	2.0
4.	ಬೆಳಗಾಂ	8.0
5.	ಬಿಜಾಪುರ	3.2
6.	ಬಾಗಲಕೋಟೆ	3.0
7.	ಉತ್ತರ ಕನ್ನಡ	2.0
	ಒಟ್ಟು	**21.2**

ಈ. ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ

1.	ಗುಲ್ಬರ್ಗಾ	3.0
2.	ಬೀದರ್	2.0
3.	ರಾಯಚೂರು	2.0
4.	ಕೊಪ್ಪಳ	2.0
5.	ಬಳ್ಳಾರಿ	3.0
	ಒಟ್ಟು	**12.0**
	ಒಟ್ಟು (ಅ+ಆ+ಇ+ಈ)	**106.7**

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರದಲ್ಲಿ ಕೆಲವೊಂದು ಅಂಶಗಳನ್ನು ಹೇಳಿದ್ದಾರೆ. ಅದು ಪೂರ್ಣವಾಗಿ ಪರಿಪೂರ್ಣತೆಯನ್ನು ಪಡೆದಿಲ್ಲ. ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಒಂದು ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅದರಲ್ಲಿರುವಂತಹದ್ದರ ಬಗ್ಗೆ ಕೇಳುತ್ತಿದ್ದೇನೆ ವರ್ಷಕ್ಕೆ ನಮಗೆ ನಮ್ಮ ರಾಜ್ಯಕ್ಕೆ ಬೇಕಾಗುವಂತಹ ವಿದ್ಯುತ್ ಸರಾಸರಿ 39,945 ದಶಲಕ್ಷ ಯೂನಿಟ್‌ಗಳು. ಇವರು ವರ್ಷಕ್ಕೆ 33,662.50 ದಶಲಕ್ಷ ಯೂನಿಟ್‌ನ್ನು ಖರೀದಿ ಮಾಡುತ್ತಾರೆ. ಆದರೆ ನಮಗೆ ಬೇಕಾಗಿರುವಂತಹ 39,945.50 ದಶಲಕ್ಷ ಯೂನಿಟ್ ವಿದ್ಯುತ್ ನಮ್ಮ ಹತ್ತಿರ ಇಲ್ಲ. ಖರೀದಿ ಮಾಡಿದ ಮೇಲೂ ಕೂಡ ಇನ್ನೂ 5,183 ದಶಲಕ್ಷ ಯೂನಿಟ್ ಬೇಕಾಗುತ್ತದೆ. ಹಾಗಾದೆ ನಾವು ವಿದ್ಯುತ್‌ನ್ನು ನಮ್ಮ ರಾಜ್ಯದವರಿಗೆ ಒದಗಿಸುವ ಬಗ್ಗೆ ನಾವು ಏನು ವ್ಯವಸ್ಥೆ ಮಾಡಿದ್ದೇವೆ. ಅದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ಇನ್ನು ಎರಡನೆಯ ಪ್ರಶ್ನೆ ಎಂದರೆ ಇವತ್ತು ರೈತರಿಗೆ ನೀವು ವಿದ್ಯುತ್‌ನ್ನು 24 ಗಂಟೆಗಳ ಕಾಲ ನಿರಂತರವಾಗಿ ಒದಗಿಸುತ್ತೇವೆಂದರೆ ತಾವೇ ಕೊಟ್ಟಿರುವಂತಹ ಉತ್ತರದಲ್ಲಿ 39 ಸಾವಿರ ದಶಲಕ್ಷ ಯೂನಿಟ್‌ಗಳು ಬೇಕು ಎಂದು ಹೇಳುತ್ತಿದ್ದೀರಿ. ಹಾಗಾದರೆ, ಈಗ ರೈತರಿಗೆ ಬೇಕಾಗಿರುವಂತಹ ವಿದ್ಯುತ್ 39000 ದಶಲಕ್ಷ ಯೂನಿಟ್‌ನ್ನು ಸೇರಿಸಿದರೆ ನಾವು ಕೊಡುತ್ತಿರುವಂತಹ ವಿದ್ಯುತ್ 39940.50 ದಶಲಕ್ಷ ಇವೆರಡನ್ನು ಸೇರಿಸಿದರೆ ನಮಗೆ ಒಟ್ಟು 78,945.5 ದಶಲಕ್ಷ ಯೂನಿಟ್ ವಿದ್ಯುತ್ ಬೇಕಾಗುತ್ತದೆ. ಇದನ್ನು ತಾವು ಹೇಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತೀರಿ?ಇದಕ್ಕೇನಾದರೂ ವ್ಯವಸ್ಥೆಯನ್ನು

ಮಾಡಿಕೊಳ್ಳುತ್ತಿದ್ದೀರಾ? ಆ ವ್ಯವಸ್ಥೆ ಏನು? ಅದರ ಬಗ್ಗೆ ದಯವಿಟ್ಟು ತಿಳಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ಹಾಗೆ ಒಂದು ವರ್ಷದಲ್ಲಿ 39 ದಶಲಕ್ಷ ಯೂನಿಟ್‌ಬೇಕೆಂದು ಹೇಳಿದರು. ಒಂದು ವರ್ಷದಲ್ಲಿ 24 ಗಂಟೆಗಳ ಕಾಲ ವಿದ್ಯುತ್‌ನ್ನು ಕೊಡುವ ಬಗ್ಗೆ ಹೇಳಿದರು. ನಮ್ಮ ರಾಜ್ಯದಲ್ಲಿ ಬೇಡಿಕೆ ಇರುವುದು ಉತ್ಪಾದನೆಯಾಗುತ್ತಿರುವುದು 39 ದಶಲಕ್ಷ ಯೂನಿಟ್ ಎಂದು ಮಾನ್ಯ ಸದಸ್ಯರು ಹೇಳಿರುವುದು. ಆದರೆ ನಮ್ಮಲ್ಲಿ ಈಗ 24 ಗಂಟೆಗಳ ಕಾಲ ವಿದ್ಯುತ್‌ನ್ನು ಎಲ್ಲಾ ಕಾಲದಲ್ಲಿ ಕೊಡುತ್ತೇವೆಂದು ಹೇಳಿಲ್ಲ. ಈಗ ಮಳೆ ಆಧಾರಿತವಾಗಿ ಡ್ಯಾಂನಲ್ಲಿ ನೀರಿನ ಆಧಾರತೆಯನ್ನು ನೋಡಿಕೊಂಡು ನಾನು ಇವತ್ತು ವಿದ್ಯುತ್‌ನ್ನು 24 ಗಂಟೆಗಳ ಕಾಲ ಕೊಡುವುದಕ್ಕೆ ನಾವು ಈಗಾಗಲೇ ಹೇಳಿದ್ದೆವು. ಆದರೆ ಇವತ್ತು ಕೆಲವು ಕಡೆ ಮಳೆ ನಿಂತಿರುವುದರಿಂದ ಅದನ್ನು ಕೊಡುವುದರ ಬಗ್ಗೆ ಪರಿಶೀಲನೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ 365 ದಿವಸವೂ 24 ಗಂಟೆಗಳ ಕಾಲ ವಿದ್ಯುತ್‌ನ್ನು ಕೊಡುತ್ತೇವೆಂದು ಹೇಳಿಲ್ಲ. ಮಳೆ ಇವತ್ತು ಕೆಲವು ಕಡೆ ಜಿಲ್ಲೆಗಳಲ್ಲಿ ಇವತ್ತು ಮಳೆಯಾಗುತ್ತಿರುವುದರಿಂದ ಐ.ಸಿ. ಸೆಟ್ 14 ಸಾವಿರ ಇದೆ, ಅದು 15–20 ದಿವಸ ಐ.ಸಿ. ಸೆಟ್‌ಗಳು ರನ್ ಆಗುವುದಿಲ್ಲ. ಆಗ 10 ದಶಲಕ್ಷ ಯೂನಿಟ್ ವಿದ್ಯುತ್ ಕಡಿಮೆಯಾಗುತ್ತದೆ. ಅದರ ಆಧಾರದ ಮೇಲೆ ನಾವು 24 ಗಂಟೆಗಳ ಕಾಲ ವಿದ್ಯುತ್‌ನ್ನು ಕೊಡುತ್ತೇವೆಂದು ಹೇಳಿದ್ದೆವು. ನಾವು ವಿದ್ಯುತ್ ಆಧಾರಿತವನ್ನು ನೋಡಿಕೊಂಡು ಕೊಡುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜು : ಮಳೆ ಆಧಾರಿತವನ್ನು ನೋಡಿಕೊಂಡು ವಿದ್ಯುತ್‌ನ್ನು ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಮಳೆ ಆಧಾರಿತವನ್ನು ನೋಡಿಕೊಂಡು ವಿದ್ಯುತ್ ಸರಬರಾಜು ಮಾಡುತ್ತೇವೆಂದು ಹೇಳಿದ್ದೀರಿ, ಮಾಡಿ ಅದರ ಬಗ್ಗೆ ಅಡ್ಡಿಯಿಲ್ಲ. ಆದರೆ ನಾವು ಹೊಂದಾಣಿಕೆ ಮಾಡಿಕೊಳ್ಳಬೇಕಾದ ವಿದ್ಯುತ್‌ನ ಲೆಕ್ಕಾಚಾರ ಎಷ್ಟಿದೆ ಎಂದರೆ, 44,183 ದಶಲಕ್ಷ, ಈ 44,183 ದಶಲಕ್ಷಕ್ಕೆ ನಮ್ಮ ಯೋಜನೆ ಏನು ಇದೆ? ನೀರಾವರಿ ಯೋಜನೆಯ ಬಗ್ಗೆ ನಾವೇ ಏನಾದರೂ, ಏನು ನಮ್ಮ ಉತ್ಪಾದನೆ ಇದೆಯೋ ಅದಕ್ಕೆ ಅನುಗುಣವಾಗಿ ನಮ್ಮ ರಾಜ್ಯಕ್ಕೆ ನಾವು ಕೂಡುವ ಪರಿಸ್ಥಿತಿಯಲ್ಲಿ ಇದ್ದಿವಾ? ಖಂಡಿತವಾಗಿಯೂ ಇಲ್ಲ. ನಮ್ಮ ನೀರಾವರಿ ಯೋಜನೆಯಲ್ಲಿ ನಾವೆಷ್ಟು ಉತ್ಪಾದನೆಯನ್ನು ಮಾಡುತ್ತೇವೆಂಬ ಬಗ್ಗೆ ಅಂಕಿಅಂಶಗಳನ್ನು ತಾವು ಕೊಟ್ಟಿದ್ದೀರಿ, ಅದರಲ್ಲಿ ಕೊಟ್ಟಿದ್ದರೂ ಕೂಡ.....

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಒಂದು ದಿವಸಕ್ಕೆ ಸರಾಸರಿ ಎಷ್ಟು ವಿದ್ಯುತ್ ಬೇಕಾಗುತ್ತದೆ ಎಂದು ತಾವು ಹೇಳಿದ್ದೀರಿ? ಎಷ್ಟು ಉತ್ಪಾದನೆಯಾಗುತ್ತದೆ ಎಂದು ಕೇಳಿದ್ದೀರಿ ಅದಾದ ಮೇಲೆ ನಿರಂತರವಾಗಿ 24 ಗಂಟೆ ವಿದ್ಯುತ್ ಕೊಡಬೇಕಾಗಿದ್ದರೆ ಎಷ್ಟು ಬೇಕಾಗುತ್ತದೆ ಎಂದು ಕೇಳಿದ್ದೀರಿ, 44,183 ದಶಲಕ್ಷ ಯೂನಿಟ್ ವಿದ್ಯುತ್ ನೀವು ಹೇಳಿರುವ ಬಗ್ಗೆ ನನಗೆ ಲೆಕ್ಕ ಸಿಗುತ್ತಿಲ್ಲ. ನಿಮ್ಮದು ಯಾವ ಕ್ಯಾಲ್ಕುಕಲೇಷನ್? ನಿಮ್ಮದೇ ಕ್ಯಾಲ್ಕುಕಲೇಷನ್ ಪ್ರಕಾರ ದಿವಸಕ್ಕೆ ಬೇಕಾಗಿರುವ ವಿದ್ಯುತ್ ಬಗ್ಗೆ ಹೇಳಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜು : ದಿನವಹಿ ಕೊಟ್ಟಿದ್ದಾರೆ, ನಾನು ಆ ದಿನವಹಿಯನ್ನು 365 ದಿವಸಗಳಿಗೆ ಗುಣಕಾರ ಮಾಡಿ ಪ್ರಶ್ನೆ ಮಾಡುತ್ತಿದ್ದೇನೆ. ಬೇರೆ ನನ್ನದು ಯಾವ ಲೆಕ್ಕಾಚಾರವಿಲ್ಲ. ಆ

ತರಹ ಮಾಡಿ ನಾನು ಲೆಕ್ಕ ಕೇಳುತ್ತಿದ್ದೇನೆಯೇ ವಿನಃ ಏಕೆಂದರೆ, ಈ ಅಂದಾಜಿನ ಪ್ರಕಾರ ದಿನದ ಲೆಕ್ಕ ಇಟ್ಟುಕೊಂಡರೆ ನಮಗೆ ಬರುವುದಿಲ್ಲ. ಈಗ ಮಳೆ ಬಂದಿದೆಯಾ ಅಥವಾ ಇಲ್ಲವಾ ಅನ್ನುವುದು, ಆ ದೃಷ್ಟಿಯಿಂದ ನಾನು ಸರಾಸರಿ ವರ್ಷಕ್ಕೆ ಇಷ್ಟು ಬೇಕಾಗುತ್ತದೆ. ವರ್ಷದಲ್ಲಿ ನಾವು ವಿದ್ಯುತ್ ಉತ್ಪಾದನೆ ಮಾಡುವುದು ಇಷ್ಟು ಇದೆ ವರ್ಷದಲ್ಲಿ ಬೇರೆ ಕಡೆಯಿಂದ ಕೊಂಡು ಕೊಳ್ಳುವುದು ಇಷ್ಟು ಇದೆ ಬಾಕಿ ಇಷ್ಟು ಇದೆ ಈ ಬಾಕಿಯನ್ನು ಹೊಂದಾಣಿಕೆ ತಾವು ಹೇಗೆ ಮಾಡುತ್ತೀರಾ ಎಂಬ ಉದ್ದೇಶದಲ್ಲಿ ನಾನು ಪ್ರಶ್ನೆಯನ್ನು ಕೇಳಿದ್ದೇನೆಯೇ ವಿನಃ ಬೇರೆ ಇನ್ಯಾವ ಉದ್ದೇಶದಿಂದಲೂ ಕೇಳಲಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಟ್ಟರೆ ಸಾಕು. ಈಗ ಹೊಂದಾಣಿಕೆಯನ್ನು ಮಾಡಿಕೊಳ್ಳಬೇಕಾಗಿರುವ ಬಗ್ಗೆ ಕೊರತೆ ಎಷ್ಟು ಇದೆ ಎನ್ನುವುದರ ಬಗ್ಗೆ ಹೇಳಿಬಿಡುತ್ತೇನೆ. 44,183 ದಶಲಕ್ಷ ಹೊಂದಾಣಿಕೆಯ ಕೊರತೆ ಇರುವುದು ಇವತ್ತು ನಮ್ಮ ಉತ್ಪಾದನೆಗೆ ಅನುಗುಣವಾಗಿಲ್ಲ, ನಮ್ಮ ಏನು ಬೇಡಿಕೆ ಇದೆ, ಆ ಬೇಡಿಕೆಯನ್ನು ಕಳೆದರೆ ನಮಗೆ ಬೇಕಾಗಿರುವಂತಹ ವಿದ್ಯುತ್ 44,183 ದಶಲಕ್ಷ ಇದೆ, ಇದನ್ನು ತಾವು ಯಾವ ರೀತಿಯಾಗಿ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತೀರಾ ಎಂಬುದನ್ನು ಹೇಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ .: ನಿಮ್ಮ ಲೆಕ್ಕದ ಪ್ರಕಾರ, ಒಂದು ದಿವಸಕ್ಕೆ ಎಷ್ಟು ಶಾರ್ಟ್‌ಫಾಲ್ ಎಂದು ಕೇಳುತ್ತಾರೆ. ಅದು ಆ ದಿವಸ 15 ರಷ್ಟು ಕಡಿಮೆ ಬೀಳುತ್ತದೆ ಅದನ್ನು 365ಕ್ಕೆ ಲೆಕ್ಕ ಹಾಕಿದರೆ ನೀವು ಹೇಳಿದಷ್ಟು ಬರುವುದಿಲ್ಲ. ಟೋಟಲ್ ಶಾರ್ಟ್‌ಫಾಲ್‌ನ್ನು ಆಗಿ ಲೆಕ್ಕ ಹಾಕಿದರೆ ಕೂಡ ಅದು ಬರುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಟೋಟಲ್ ಶಾರ್ಟ್‌ಫಾಲ್ 14.2 ದಶಲಕ್ಷ ಇದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : 39,000 ದಶಲಕ್ಷ ಯೂನಿಟ್ ಒಂದು ವರ್ಷಕ್ಕೆ ಕಡಿಮೆ ಬೀಳುತ್ತದೆ.

ಶ್ರೀ ಹೆಚ್.ಡಿ. ಬಸವರಾಜು : ನಾನು ಇಲ್ಲಿ ಚರ್ಚೆ ಮಾಡುವುದಕ್ಕೆ ಬಂದಿಲ್ಲಾ ಸಾರ್. ನೀವು ಕೊಟ್ಟಿರುವಂತಹ ಮಾಹಿತಿಯನ್ನು ಗುಣಕಾರ ಹಾಕಿ ತಮ್ಮ ಹತ್ತಿರ ಹೇಳುತ್ತಿದ್ದೇನೆ. ಮಾನ್ಯ ರಮೇಶ್‌ಕುಮಾರ್‌ರವರು ಸ್ಪೀಕರ್ ಆಗಿದ್ದವರು ಈ ತರಹ ನಮಗೆ ಪ್ರಶ್ನೆಯನ್ನು ಕೇಳಿದರೆ ಹೇಗೆ? ತಾವು ಸದಸ್ಯರಿಗೆ ಸಹಕಾರವನ್ನು ಕೊಡಬೇಕು, ತಾವು ಹಿರಿಯ ಸದಸ್ಯರಾಗಿದ್ದೀರಿ, ಈ ಸದನದಲ್ಲಿದ್ದೀರಿ, ಈ ರಾಜ್ಯದ ಜನತೆ ಇದನ್ನು ನಿರೀಕ್ಷೆ ಮಾಡುತ್ತಿದ್ದಾರೆ. ಜನತೆಗೆ ಉತ್ತರ ಕೊಡಿಸುವ ಬಗ್ಗೆ ತಾವು ಸಹಕಾರಿಯಾಗಬೇಕು. ನೀವೇ ನಮಗೆ ಪ್ರಶ್ನೆಯನ್ನು ಕೇಳಿದರೆ ಹೇಗೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಬಸವರಾಜುರವರೆ ಆ ರೀತಿ ಮುಖವನ್ನು ಸಿಟ್ಟು ಮಾಡಿಕೊಳ್ಳಬೇಡಿ, ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಾನು ನಿಮ್ಮನ್ನು ಪ್ರಶ್ನೆ ಮಾಡಬೇಕೆಂದು ಕೇಳುತ್ತಿಲ್ಲ. ನೀವು ಕೇಳಿರತಕ್ಕಂತಹ ಪ್ರಶ್ನೆಯ ಡೀಟೇಲ್ಸ್ ಇಲ್ಲಿ ಇದೆ. ವಿವರ ಹೀಗೆ ಇದೆ. ಗುಣಕಾರ ಹೀಗೆ ಮಾಡಿದರೆ ಹೀಗೆ ಬರುತ್ತದೆ. ಅದು ಹಾಗೆ ಬರುತ್ತದೆಂದು ನಾನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಶಾರ್ಟೇಜ್ ಎಷ್ಟು ಬರುತ್ತದೆ? ಪ್ರತಿಯೊಂದಕ್ಕೂ ತಾವು ಹಿರಿಯರು ಎಂದು ಹೇಳಿದರೆ, ಕಿರಿಯನಾಗಲು ನಾನು ಏನು ಮಾಡಬೇಕು ತಾವು ಹೇಳಿ?

ಶ್ರೀ ಬಸವರಾಜರಾಯರೆಡ್ಡಿ : 14 ಲಕ್ಷ ಮಾತ್ರ ಕಡಿಮೆ ಬರುತ್ತದೆ ನೀವು 44 ಲಕ್ಷ ಎಂದು ಹೇಳುತ್ತಿದ್ದೀರಿ. ಅದರಲ್ಲಿ ಯಾವುದು ಸರಿ, ಮತ್ತು ಯಾವುದು ತಪ್ಪು ಎನ್ನುವುದು ಇಲ್ಲಿ ಪ್ರಶ್ನೆ ಅಷ್ಟೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅವರು ಹೇಳುತ್ತಿರುವುದು ಸರಿಯೇ, ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಸರಿಯೇ ಎಂದು ನಾನು ಕೇಳುತ್ತಿರುವುದು. I am not trying to intervene ಅದು ನಮ್ಮ ಸಮಸ್ಯೆ. ದಯವಿಟ್ಟು ಕೇಳಿ.

ಶ್ರೀ ಹೆಚ್.ಡಿ. ಬಸವರಾಜು : ನಾನು ಕಳುಹಿಕೊಡುತ್ತೇನೆ. ತಾವು ಪರಿಶೀಲನೆ ಮಾಡಿ.

ಅಧ್ಯಕ್ಷರು : ಮಾನ್ಯ ಬಸವರಾಜುರವರೆ, ಈ ಅಂಕಿಅಂಶಗಳ ಬಗ್ಗೆ ಸ್ವಲ್ಪ ಗೊಂದಲವಾಗಿದೆ, ದಯಮಾಡಿ ತಾವು ಮಾನ್ಯ ಸಚಿವರ ಜೊತೆಯಲ್ಲಿ ಕುಳಿತುಕೊಂಡು ಅದರ ಬಗ್ಗೆ ಚರ್ಚೆ ಮಾಡಿ ತಮ್ಮ ಅನುಮಾನಗಳನ್ನು ಪರಿಹಾರ ಮಾಡಿಕೊಳ್ಳಿ. ಮುಂದಿನ ಪ್ರಶ್ನೆ ಕೇಳುವುದಕ್ಕೆ ಅನುಕೂಲ ಮಾಡಿಕೊಡಿ. ಇನ್ನೂ 6-7 ಪ್ರಶ್ನೆಗಳು ಉಳಿದಿವೆ. ದಯವಿಟ್ಟು ಸಹಕರಿಸಿ.

ಶ್ರೀ ಹೆಚ್.ಡಿ. ಬಸವರಾಜು : ರೈತರ ಪಂಪುಸೆಟ್ಟುಗಳಿಗೆ ವಿಧಿಸುವಂತಹ ಶುಲ್ಕ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಸಮಾನವಾಗಿದೆಯಾ? ಏಕೆಂದರೆ ನನ್ನ ಕೊಡಗು ಜಿಲ್ಲೆಯಲ್ಲಿ ರೈತರ ಪಂಪುಸೆಟ್ಟುಗಳಿಗೆ ತಾವು ವಿಧಿಸುತ್ತಿರುವಂತಹ ಶುಲ್ಕವನ್ನು ಇತರೆ ಜಿಲ್ಲೆಗಳಿಗೆ ನಾವು ಹೋಲಿಕೆ ಮಾಡಿದಾಗ ವ್ಯತ್ಯಾಸ ನನಗೆ ಕಂಡುಬಂದಿದೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ದಯಮಾಡಿ ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯನ್ನು ರಿಪೀಟ್ ಮಾಡಬೇಕು.

ಶ್ರೀ ಹೆಚ್.ಡಿ. ಬಸವರಾಜು : ಈ ರೈತರ ಪಂಪುಸೆಟ್ಟುಗಳಿಗೆ ತಾವು ವಿಧಿಸುತ್ತಿರುವಂತಹ ಶುಲ್ಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಮಾನವಾಗಿದೆಯಾ? ನನಗೆ ಗೊತ್ತಿರುವಂತಹ ಅಂಶದ ಪ್ರಕಾರ ಇದರ ಬಗ್ಗೆ ನಾನೇ ಉತ್ತರವನ್ನು ಹೇಳಿಬಿಡುತ್ತೇನೆ. ಕೊಡಗು ಜಿಲ್ಲೆಯಲ್ಲಿ ರೈತರ ಪಂಪುಸೆಟ್ಟುಗಳಿಗೆ ವಿಧಿಸುತ್ತಿರುವಂತಹ ಶುಲ್ಕ ಇತರ ಜಿಲ್ಲೆಯವರಿಗಿಂತ ಜಾಸ್ತಿ ಇದೆ? ಅದು ಹೇಗೆ ಸಾಧ್ಯ?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದು ಅವರ ಮೂಲ ಪ್ರಶ್ನೆಯಲ್ಲಿ ಇಲ್ಲ, ಅವರು ಉತ್ತರ ಬೇಕಾದರೆ ಸೆಪರೇಟಾಗಿ ಪ್ರಶ್ನೆಯನ್ನು ಕಳುಹಿಸಿದರೆ ನಾನು ಅವರಿಗೆ ತಿಳಿಸುತ್ತೇನೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ಕೆರೆಗಳಲ್ಲಿನ ಹೂಳುಗಳು

40 (143): ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಉತ್ತು ಉಡುಪಿ ಜಿಲ್ಲೆಗಳಲ್ಲಿನ ಕೆರೆಗಳ ಸಂಖ್ಯೆ ಎಷ್ಟು; ಈ ತನಕ ಎಷ್ಟು ಕೆರೆಗಳ ಹೂಳನ್ನು ಎತ್ತಿ ದುರಸ್ತಿಗೊಳಿಸಲಾಗಿದೆ;